ಸಾಕ್ಷಿಯನ್ನು ದಿನಾಂಕಃ **24-01-2026** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ. ವಿ ಆರ್ ಎನ್., ವಕೀಲರಿಂದಃ**

ಈ ಪ್ರಕರಣ ದಾಖಲಾಗುವ ಪೂರ್ವದ 5 ವರ್ಷದಿಂದ ಚೆಕ್ಕಿನ ವ್ಯವಹಾರ ಮಾಡಿರುತ್ತೇನೆ. 3-4 ವರ್ಷಗಳಲ್ಲಿ 4 ರಿಂದ 5 ಲಕ್ಷ ಟರ್ನಓವರ್ ಆಗಿದೆ. ನನಗೆ ಚೆಕ್ಕಿನ ಬಗ್ಗೆ ಮಾಹಿತಿ ಇದೆ. ನನ್ನ ಮಗನ ಹೆಸರು ನವೀನ ಗಣಪತಿ ಮುಕ್ರಿ ಆಗಿರುತ್ತದೆ. ಆತನ ಬ್ಯಾಂಕ್ ಖಾತೆ ಇದೆ. ಫಿರ್ಯಾದಿಯ ಬ್ಯಾಂಕ್ ಖಾತೆಯಿಂದ ನನ್ನ ಮಗನ ಖಾತೆಗೆ ರೂ.50 ಸಾವಿರ ಜಮಾ ಮಾಡಿದ್ದು ಇರುವುದಿಲ್ಲ. ಫಿರ್ಯಾದಿದಾರ ಚೆಕ್ ಬೌನ್ಸ ಆದ ಬಗ್ಗೆ ನನಗೆ ನೋಟೀಸನ್ನು ನೀಡಿದ್ದು ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನಗೆ ಸಂಘದ ನೋಟೀಸು ಬರುವುದರಿಂದ ಅದು ತಿಳಿದಿಲ್ಲ ಎಂದು ನುಡಿದಿರುತ್ತಾರೆ. ನಾನು ನೋಟೀಸನ್ನು ಸ್ವೀಕರಿಸಿದ್ದೇನೆ ಆದರೆ ಅದನ್ನು ತೆರೆಯದೆ ಇರಬಹುದು. ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ ಈ ಪ್ರಕರಣದ ಬಗ್ಗೆ ಗೊತ್ತಾಯಿತು. ಆ ಸಂದರ್ಭದಲ್ಲಿ ನಾನು, ನನ್ನ ವಕೀಲರ ಬಳಿ ನನ್ನ ಚೆಕ್ಕು ಫಿರ್ಯಾದಿ ಕದ್ದುಕೊಂಡು ಹೋಗಿದ್ದಾನೆ ಎಂದು ಹೇಳಿದ್ದು ಇರುವುದಿಲ್ಲ. ನಾನು ಫಿರ್ಯಾದಿಯ ಸಾಕ್ಷಿಯಾದ ನಂತರ ನಾನು ವಕೀಲರಿಗೆ ಚೆಕ್ಕನ್ನು ನನ್ನ ತಾಯಿ ಫಿರ್ಯಾದಿಗೆ ನೀಡಿದ ಬಗ್ಗೆ ತಿಳಿಸಿದ್ದೆನು. ಚೆಕ್ಕಿನ ಮೇಲಿರುವ ಸಹಿಯು ನನ್ನದೇ ಆಗಿರುತ್ತದೆ. ನಾನು ಎರಡು ಚೆಕ್ಕಿಗೆ ಸಹಿ ಹಾಕಿ ಇಟ್ಟಿದ್ದೆನು. ನಾನು ಚೆಕ್ಕಿಗೆ ಸಹಿ ಹಾಕುವಾಗ ನನ್ನ ಖಾತೆಯಲ್ಲಿ 1 ಲಕ್ಷದ 49 ಸಾವಿರ ರೂಪಾಯಿ ಇತ್ತು. ನಾನು 1 ಲಕ್ಷದ 49 ಸಾವಿರ ರೂಪಾಯಿ ಹಣವನ್ನು ತೆಗೆದಿದ್ದೆನು. ಈ ಹಣವನ್ನು ಎರಡು ಬಾರಿ ತೆಗೆದಿದ್ದೆನು. ಸಾಕ್ಷಿಯು ಮುಂದುವರೆದು ನಾನು ಎರಡು ಬಾರಿ ಹಣವನ್ನು ತೆಗೆದಿರಬಹುದು, ನೆನಪಿಲ್ಲ ಎಂದು ನುಡಿದಿರುತ್ತಾರೆ. ಎರಡು ಬಾರಿ ಎಷ್ಟೆಷ್ಟು ಹಣ ತೆಗೆದಿದ್ದೇವೆ ಎಂದು ನೆನಪಿಲ್ಲ. ನನ್ನ ಯಜಮಾನರು 1 ಲಕ್ಷದ 49 ಸಾವಿರವನ್ನು ಹೇಗೆ ತೆಗೆದಿದ್ದಾರೆ ಹಾಗೂ ಎಷ್ಟು ಬಾರಿ ತೆಗೆದಿದ್ದಾರೆ ಎಂದು ಗೊತ್ತಿಲ್ಲ. 1 ಲಕ್ಷದ 49 ಸಾವಿರವನ್ನು ಹೇಗೆ ಹಾಗೂ ಎಷ್ಟು ಬಾರಿ ತೆಗೆದಿದ್ದಾರೆ ಎಂಬ ಬಗ್ಗೆ ನಾನು ನನ್ನ ಯಜಮಾನರ ಬಳಿ ಕೇಳಿದ್ದು ಇರುವುದಿಲ್ಲ. ಸಾಕ್ಷಿಗೆ ನೀವು ಎಷ್ಟು ಚೆಕ್ಕನ್ನು ಉಪಯೋಗಿಸಿದ್ದೀರಿ ಎಂದು ಕೇಳಲಾಗಿ ಸಾಕ್ಷಿಯು ಅದಕ್ಕೆ ಉತ್ತರಿಸಿದ್ದು ಇರುವುದಿಲ್ಲ. ಫಿರ್ಯಾದಿಯು ನನ್ನ ಚೆಕ್ಕನ್ನು ಕೊಂಡುಹೋದ ಬಗ್ಗೆ ನಾನು ಪೊಲೀಸರಿಗೆ ದೂರನ್ನು ನೀಡಿದ್ದು ಇರುವುದಿಲ್ಲ. ನಾನು ಫಿರ್ಯಾದಿಗೆ ಹಣ ಮರುಪಾವತಿ ಮಾಡುವ ಕುರಿತು ಚೆಕ್ಕನ್ನು ನೀಡಿದ್ದರೂ ಇಲ್ಲಿ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

-Sd/-

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**
**ಹೊನ್ನಾವರ.**